NOVEMBER 14, 2024

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ‘ವಿಕಸಿತ ಭಾರತ ನಿರ್ಮಾಣದಲ್ಲಿ, ಸಹಕಾರ ಸಂಸ್ಥೆಗಳ ಪಾತ್ರ’ ಧ್ಯೇಯದೊಂದಿಗೆ, 71ನೇ ಅಖಿಲ ಭಾರತ ಸಹಕಾರ ಸಪ್ತಾಹ, ಇಂದು ಆರಂಭ.
- ‘ಸಹ್ಯಾದ್ರಿ ಕೆಂಪು ಮುಕ್ತಿ’ ಭತ್ತದ ತಳಿ, ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ಕೊಡುಗೆ – ಆರ್.ಸಿ. ಜಗದೀಶ.
- ‘ಅಡೆತಡೆಗಳನ್ನು ತೊಡೆದು, ಅಂತರ ನಿವಾರಣೆ’ ಘೋಷಣೆಯೊಂದಿಗೆ, ಇಂದು ವಿಶ್ವ ಮಧುಮೇಹ ಜಾಗ್ರತಿ ದಿನಾಚರಣೆ.
- ಕರ್ನಾಟಕ ಮಿನಿ ಒಲಿಂಪಿಕ್ಸ್‌ಗೆ, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ, ಇಂದು, ಮುಖ್ಯಮಂತ್ರಿ ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ, ಉಪ ಚುನಾವಣೆ ಹಿನ್ನೆಲೆ, ನಿನ್ನೆ ಮತದಾನ ಶಾಂತಿಯುತವಾಗಿ ಜರುಗಿತು. ಶಿಗ್ಗಾಂವಿಯಲ್ಲಿ ಶೇಕಡ 80 ದಶಾಂಶ 4–8, ಸಂಡೂರಿನಲ್ಲಿ ಶೇಕಡ 76 ದಶಾಂಶ 2–4 ರಷ್ಟು, ಚನ್ನಪಟ್ಟಣದಲ್ಲಿ 88 ದಶಾಂಶ 8–0 ಯಷ್ಟು ಮತದಾನ ದಾಖಲಾಗಿದೆ. 23 ರಂದು ಮತ ಎಣಿಕೆ ನಡೆಯಲಿದೆ ಎಂದು, ಚುನಾವಣಾ ಆಯೋಗ ತಿಳಿಸಿದೆ.

<><><>

“ವಿಕಸಿತ ಭಾರತ ನಿರ್ಮಾಣದಲ್ಲಿ, ಸಹಕಾರ ಸಂಸ್ಥೆಗಳ ಪಾತ್ರ” ಎಂಬ ಧ್ಯೇಯದೊಂದಿಗೆ, ಇಂದಿನಿಂದ 7 ದಿನಗಳ ಕಾಲ, 71ನೇ ಅಖಿಲ ಭಾರತ ಸಹಕಾರ ಸಪ್ತಾಹ, ರಾಜ್ಯಾದ್ಯಂತ ಎಲ್ಲ 31 ಜಿಲ್ಲೆಗಳಲ್ಲಿ ಆಯೋಜಿತವಾಗಿದೆ.

<><><>

ದಾವಣಗೆರೆ ಜಿಲ್ಲೆ ಸಹಕಾರ ಸಂಘಗಳ ಅಧ್ಯಕ್ಷ, ಸಿರಿಗೆರೆ ರಾಜಣ್ಣ ಮಾತನಾಡಿ, ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳಲ್ಲಿ, ಸಹಕಾರ ಸಪ್ತಾಹವನ್ನು ವಿಶೇಷ ಕಾರ್ಯಕ್ರಮವಾಗಿ, ಸಂಘಟಿಸಲಾಗಿದೆ.  ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಹಕಾರ ಇಲಾಖೆ ಸಿಬ್ಬಂದಿ ಭಾಗವಹಿಸಲಿದ್ದಾರೆ ಎಂದರು.

<><><>

ಚಿತ್ರದುರ್ಗ ಜಲ್ಲೆಯ, ಆರೂ ತಾಲೂಕುಗಳಲ್ಲಿ, ಸಹಕಾರ ಸಪ್ತಾಹ ಆಚರಿಸಲಾಗುವುದು ಎಂದು, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ದ್ಯಾಮಣ್ಣ ತಿಳಿಸಿದ್ದಾರೆ.

<><><>

'ಸಹ್ಯಾದ್ರಿ ಕೆಂಪು ಮುಕ್ತಿ', ಭತ್ತದ ತಳಿ, ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕೊಡುಗೆ ಎಂದು ಉಪ ಕುಲಪತಿ ಆರ್.ಸಿ. ಜಗದೀಶ ತಿಳಿಸಿದ್ದಾರೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ, ಶಿವಮೊಗ್ಗದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ, ಭದ್ರಾವತಿಯ ಮಾರುತಿ ನಗರದಲ್ಲಿ, ಭತ್ತದಲ್ಲಿ ಪೋಷಕಾಂಶಗಳ ನಿರ್ವಹಣೆ ಕುರಿತ, ಕ್ಷೇತ್ರೋತ್ಸವವನ್ನು ಉದ್ಘಾಟಿಸಿ, ಅವರು ಮಾತನಾಡಿದರು. 'ಸಹ್ಯಾದ್ರಿ ಕೆಂಪು ಮುಕ್ತಿ' ಭತ್ತ, ಕೆಂಪು ಬಣ್ಣ ಹೊಂದಿದ್ದು, ಹೆಚ್ಚು ಪೋಷಕಾಂಶ ಮತ್ತು ರುಚಿ ಹೊಂದಿದೆ. 'ಗಂಧಸಾಲೆ' ಭತ್ತದ ತಳಿ, ಹೆಚ್ಚು ಪರಿಮಳ ಹೊಂದಿ, ಜೀರಿಗೆಯಂತಿದೆ ಎಂದರು. ಭತ್ತದ ಕ್ಷೇತ್ರೋತ್ಸವದಲ್ಲಿ ಪಾಲ್ಗೊಂಡಿದ್ದ, 75 ಜನ ಪ್ರಗತಿಪರ ರೈತರಿಗೆ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಸಿ. ಸುನಿಲ, ವಿಸ್ತರಣಾ ಸಹ ನಿರ್ದೇಶಕ ಬಿ.ಸಿ. ಹನುಮಂತಸ್ವಾಮಿ, ಸಹ ಸಂಶೋಧನಾ ನಿರ್ದೇಶಕ ಎಸ್. ಪ್ರದೀಪ ಮಾಹಿತಿ ನೀಡಿದರು.

<><><>

ಗದಗ ಜಿಲ್ಲೆ, ಹುಲಕೋಟಿಯ ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಆಶ್ರಯದಲ್ಲಿ, ಮುಂಡರಗಿ ತಾಲೂಕಿನ ಶಿಂಗಟರಾಯನಕೇರಿ ಗ್ರಾಮದಲ್ಲಿ, ಸೇವಂತಿಗೆ ಬೆಳೆಯ ಕ್ಷೇತ್ರೋತ್ಸವ, ರೈತ ನವೀನ ಪಾಟೀಲ ಅವರ ಹೊಲದಲ್ಲಿ ಜರುಗಿತು.ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಎನ್. ಎಚ್. ಭಂಡಿ ಪಾಲ್ಗೊಂಡಿದ್ದರು.

<><><>

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ  ಇಂದಿನಿಂದ ಇದೇ 17ರ ವರೆಗೂ, ಕೃಷಿ ಮೇಳ ಆಯೋಜಿಸಲಾಗಿದೆ ಎಂದು, ಉಪ ಕುಲಪತಿ ಎಸ್.ವಿ. ಸುರೇಶ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹವಾಮಾನ ಚತುರ ಡಿಜಿಟಲ್ ಕೃಷಿ' ಎಂಬ ಘೋಷ ವಾಕ್ಯದೊಂದಿಗೆ ಆಯೋಜಿತವಾದ  ಕೃಷಿ ಮೇಳದಲ್ಲಿ, ಡಿಜಿಟಲ್ ಕೃಷಿ ತಂತ್ರಜ್ಞಾನ, ಡ್ರೋನ್ ಹಾಗೂ ರೋಬೊಟಿಕ್ ಕೃಷಿ ಯಂತ್ರ ಬಳಕೆ ಬಗ್ಗೆ, ಪ್ರಾತ್ಯಕ್ಷಿಕೆ ಆಯೋಜಿಸಲಾಗಿದೆ ಎಂದರು.

<><><>

ವಿಶ್ವ ಮಧುಮೇಹ ದಿನಾಚರಣೆಯನ್ನು ಇಂದು, 'ಆರೈಕೆಯ ಅಡೆತಡೆಗಳನ್ನು ತೊಡದು ಹಾಕಿ, ಚಿಕಿತ್ಸೆಯ ಅಂತರವನ್ನು ನಿವಾರಿಸುವುದು' ಎಂಬ ಘೋಷವಾಕ್ಯದೊಂದಿಗೆ, 'ಮಧುಮೇಹ ಮತ್ತು ಯೋಗಕ್ಷೇಮ' ಎಂಬ ಧ್ಯೇಯದೊಂದಿಗೆ, ಜನ ಜಾಗ್ರತಿ ಮೂಡಿಸಲಾಗುತ್ತಿದೆ. ಮಧುಮೇಹ ಎಂಬುದು ರೋಗವಲ್ಲ; ಅಸ್ವಸ್ಥತೆ. ಸೂಕ್ತ ಚಿಕಿತ್ಸೆ ಪಡೆದಲ್ಲಿ, ಅಸ್ವಸ್ಥತೆಯನ್ನು ಗುಣಪಡಿಸಬಹುದು ಎಂದು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಆಯುರ್ಧಾಮದ ಹಿರಿಯ ಆಯುರ್ವೇದ ವೈದ್ಯ ಡಾಕ್ಟರ್ ಮಹಾಂತಸ್ವಾಮಿ ಹಿರೇಮಠ.

<><><>

ವೈದ್ಯ ಡಾಕ್ಟರ್ ಮಹಾಂತಸ್ವಾಮಿ ಹಿರೇಮಠ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿ, ಮಕ್ಕಳ ನೆಚ್ಚಿನ 'ಚಾ ಚಾ ನೆಹರೂ' ಅವರ 135ನೇ ಜನ್ಮ ದಿನವಿಂದು. ಜವಹರಲಾಲ್ ನೆಹರು ಅವರ ಹುಟ್ಟಿದ ಹಬ್ಬ, ನವೆಂಬರ್ 14ನ್ನು ಮಕ್ಕಳ ದಿನಾಚರಣೆಯಾಗಿ, ದೇಶಾದ್ಯಂತ ಇಂದು ವಿಶಿಷ್ಟವಾಗಿ ಆಚರಿಸಲಾಗುತ್ತಿದೆ. ರಾಜ್ಯದ ಹಲವೆಡೆ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಲಾಗಿದೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ, 'ಮಕ್ಕಳ ಪಂಚಾಯತ್ ಅರಿವಿನ ಹಬ್ಬ' ಆಯೋಜಿಸಲಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆಗಾಗಿ, ಇಂದಿನಿಂದ 2025ರ ಜನವರಿ 24ರ ವರೆಗೆ, 10 ವಾರಗಳ, 'ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಹಾಗೂ ಒಂದು ದಿನ 'ಮಕ್ಕಳ ವಿಶೇಷ ಗ್ರಾಮ ಸಭೆ' ಗಳನ್ನು ಆಯೋಜಿಸಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಸಿ.ಇ.ಓ. ಕೆ.ಎನ್ ಅನುರಾಧಾ ತಿಳಿಸಿದ್ದಾರೆ.

<><><>

ವೈಜ್ಞಾನಿಕ ಅಧ್ಯಯನಕ್ಕಾಗಿ, ಮಹಾರಾಷ್ಟ್ರದ ತಾಡೋಬಾ-ಅಂಧಾರಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ, ರಣಹದ್ದುಗಳ ಪ್ರಜನನ ಕೇಂದ್ರದಲ್ಲಿ, ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸಾಯಿಟಿಯಿಂದ, ಜಿ.ಪಿ.ಎಸ್. ಟೆಲಿಮೆಟ್ರಿ ಅಳವಡಿಸಲಾದ, ರಣಹದ್ದು ಕಾರವಾರದ ನೌಕಾ ನೆಲೆ ಐ.ಎನ್.ಎಸ್. ಕದಂಬದಿಂದ ಕೇವಲ 5 ಕಿಲೋ ಮೀಟರ್ ದೂರದಲ್ಲಿ ಪತ್ತೆಯಾಗಿದೆ. ಕಾಳಿ ಹುಲಿ ಸಂರಕ್ಷಿತ ಅಭಯಾರಣ್ಯದ, ಕಾಳಿ ನದಿ ಹಿನ್ನೀರಿನಲ್ಲಿ ಪತ್ತೆಯಾದ, 'ರಿಂಗ್ಡ್ ಆಂಡ್ ಟ್ಯಾಗ್ಡ್' ಜಟಾಯು ಪಕ್ಷಿ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕಾರವಾರದ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ರವಿಶಂಕರ.

<><><>

ಡಿ.ಎಫ್.ಓ. ರವಿಶಂಕರ ಧ್ವನಿ 40 ಸೆಕೆಂದುಗಳು

<><><>

ಕರ್ನಾಟಕ ಮಿನಿ ಒಲಿಂಪಿಕ್ಸ್‌ನ ಮೂರನೇ ಆವೃತ್ತಿಗೆ, ಇಂದು ಸಂಜೆ 5 ಗಂಟೆಗೆ, ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಒಂದು ವಾರ ನಡೆಯಲಿರುವ, ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದ, 24 ವಿಭಾಗಗಳಲ್ಲಿ, ನಾಲ್ಕು ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಸ್ಪರ್ಧಿಸಲಿದ್ದಾರೆ. 'ಕಂಠೀರವ ಕ್ರೀಡಾಂಗಣ ಸೇರಿದಂತೆ, ಬೆಂಗಳೂರಿನ ಒಂಬತ್ತು ಸ್ಥಳಗಳಲ್ಲಿ ಕ್ರೀಡಾಕೂಟಗಳು ಆಯೋಜಿತವಾಗಿವೆ. ರಾಜ್ಯ ಸರ್ಕಾರ 3 ಕೋಟಿ ರೂಪಾಯಿ ಅನುದಾನ ಮಂಜೂರು ಮಾಡಿದೆ' ಎಂದು, ರಾಜ್ಯ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ. ಗೋವಿಂದರಾಜ ತಿಳಿಸಿದ್ದಾರೆ. 'ಪಂದ್ಯಾವಳಿಯ 15 ಅಗ್ರಣಿ ಕ್ರೀಡಾಪಟುಗಳು, 5 ಸಾವಿರ ರೂಪಾಯಿ ನಗದು ಬಹುಮಾನ ಪಡೆಯಲಿದ್ದಾರೆ. ಉತ್ತಮ ಪ್ರದರ್ಶನದ ಆಧಾರದ ಮೇಲೆ, ರಾಜ್ಯ ಒಲಿಂಪಿಕ್ ಅಸೋಸಿಯೇಷನ್, ಡ್ರೀಮ್ ಸ್ಪೋರ್ಟ್ಸ್ ಫೌಂಡೇಶನ್ ಮತ್ತು ಸೆಂಟರ್ ಫಾರ್ ಸ್ಪೋರ್ಟ್ಸ್ ಸೈನ್ಸ್‌ಗೆ, ಇನ್ನೂರು ಅಥ್ಲೀಟ್‌ಗಳ ಹೆಸರನ್ನು ಶಿಫಾರಸು ಮಾಡಲಿದ್ದು, ಅವರು ಕಂಠೀರವದಲ್ಲಿ ಅಂತಿಮವಾಗಿ ಆಯ್ಕೆಯಾದ, 50 ಕ್ರೀಡಾಪಟುಗಳಿಗೆ ಸೂಕ್ತ ತರಬೇತಿ ನೀಡಲಿದ್ದಾರೆ' ಎಂದರು.

<><><>

ಮೈಸೂರಿನ ವರ್ಣಚಿತ್ರಕಾರ, ಗಂಜೀಫಾ ರಘುಪತಿ ಭಟ್ ಅವರಿಗೆ, ಮಧ್ಯಪ್ರದೇಶದ ಉಜ್ಜಯಿನಿಯ ಕಾಳಿದಾಸ ಸಂಸ್ಕೃತ ಅಕಾದೆಮಿಯಲ್ಲಿ, ಉಪರಾಷ್ಟ್ರಪತಿ ಜಗದೀಪ ಧನಕರ ಅವರು, 'ಕಾಳಿದಾಸ ಸಮ್ಮಾನ್' ಪ್ರಶಸ್ತಿಯನ್ನು ಪ್ರದಾನ ಮಾಡಿದರು. 66ನೇ ಅಖಿಲ ಭಾರತ ಕಾಳಿದಾಸ ದಿನಾಚರಣೆ ಅಂಗವಾಗಿ, ಮೈಸೂರಿನ ಲಕ್ಷಣ ಶಾಸ್ತ್ರದ ಅನ್ವಯ ಗಂಜೀಫಾ ಕಲೆ ಮತ್ತು ಕರಾವಳಿಯ ಕಾವಿ ಕಲೆಯನ್ನು, ಪುನರುಜ್ಜೀವಿತ ಗೊಳಿಸಿದ ಹಿನ್ನೆಲೆ, ರಘುಪತಿ ಭಟ್ಟರಿಗೆ, 5 ಲಕ್ಷ ರೂಪಾಯಿಗಳ ನಗದು ಪುರಸ್ಕಾರ, ಪ್ರಶಸ್ತಿ ಫಲಕ ಸಂದಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕಾರ್ತಿಕ ಮಾಸದ, ಶುಕ್ಲ ಪಕ್ಷದ ದ್ವಾದಶಿಯ ಅಂಗವಾಗಿ, ನಿನ್ನೆ ತುಳಸಿ ವಿವಾಹ ಮತ್ತು ಪೂಜೆಯನ್ನು, ಶ್ರದ್ಧಾ ಭಕ್ತಿಯಿಂದ ನಾಡಿನಾದ್ಯಂತ ಆಚರಿಸಲಾಯಿತು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಬೃಂದಾವನವನ್ನು ತಳಿರು ತೋರಣದಿಂದ ಸಿಂಗರಿಸಿ, ಬೆಟ್ಟದ ನೆಲ್ಲಿಕಾಯಿಯನ್ನಿರಿಸಿ, ಪೂಜಿಸಿದ ದೃಶ್ಯ ವಿಶೇಷವಾಗಿತ್ತು.

<><><>

ದಾವಣಗೆರೆಯ ರೈಲು ನಿಲ್ದಾಣದ ಜನೌಷಧಿ ಕೇಂದ್ರವನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ, ವರ್ಚುವಲ್ ವೇದಿಕೆಯಲ್ಲಿ ಉದ್ಘಾಟಿಸಿದರು.

<><><>

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಜಯಪುರ, ಶೃಂಗೇರಿ ಹಾಗೂ ಕುದುರೆಮುಖ ವ್ಯಾಪ್ತಿಯಲ್ಲಿ, ನಕ್ಸಲ್ ನಿಗ್ರಹ ಪಡೆ ಹಾಗೂ ಪೊಲೀಸ್ ಇಲಾಖೆ ವತಿಯಿಂದ ನಕ್ಸಲ್ ಕೊಂಬಿಂಗ್ ಕಾರ್ಯಾಚರಣೆ ಮುಂದುವರೆದಿದೆ.

<><><>

ಬಂಡೀಪುರ ಅಭಯಾರಣ್ಯ ಮಧ್ಯದ ಹೆದ್ದಾರಿಯಲ್ಲಿ, ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ನೀಡುವ ಬಗ್ಗೆ, ಸರ್ಕಾರದ ಮುಂದೆ, ಯಾವುದೇ ಪ್ರಸ್ತಾವ ಇಲ್ಲ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರಿನಲ್ಲಿ ಸ್ಪಷ್ಟ ಪಡಿಸಿದ್ದಾರೆ.

<><><>

ರಾಜ್ಯ ಮಾನವ ಹಕ್ಕು ಆಯೋಗದ ಸದಸ್ಯ ಎಸ್.ಕೆ. ವಂಟಿಗೋಡಿ, ಅವರು ಕಾರವಾರದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

<><><>

ಶಿವಮೊಗ್ಗದ ಕುವೆಂಪು ರಂಗ ಮಂದಿರದಲ್ಲಿ, ಕೇಂದ್ರದ ಯುವಜನ ಮಂತ್ರಾಲಯ, ಇಂದಿನಿಂದ 'ಪಂಚ ಪ್ರಣ, ಭಾರತ @ 2047' ಪ್ರತಿಭಾ ಪ್ರದರ್ಶನ ಸ್ಪರ್ಧೆ ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ವಿಕಸಿತ ಭಾರತ ನಿರ್ಮಾಣದಲ್ಲಿ, ಸಹಕಾರ ಸಂಸ್ಥೆಗಳ ಪಾತ್ರ‘ ಧ್ಯೇಯದೊಂದಿಗೆ, 71ನೇ ಅಖಿಲ ಭಾರತ ಸಹಕಾರ ಸಪ್ತಾಹ, ಇಂದು ಆರಂಭ.
- ‘ಸಹ್ಯಾದ್ರಿ ಕೆಂಪು ಮುಕ್ತಿ’ ಭತ್ತದ ತಳಿ, ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ಕೊಡುಗೆ – ಆರ್.ಸಿ. ಜಗದೀಶ.
- ‘ಅಡೆತಡೆಗಳನ್ನು ತೊಡೆದು, ಅಂತರ ನಿವಾರಣೆ’ ಘೋಷಣೆಯೊಂದಿಗೆ, ಇಂದು ವಿಶ್ವ ಮಧುಮೇಹ ಜಾಗ್ರತಿ ದಿನಾಚರಣೆ.
- ಕರ್ನಾಟಕ ಮಿನಿ ಒಲಿಂಪಿಕ್ಸ್‌ಗೆ, ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ, ಇಂದು, ಮುಖ್ಯಮಂತ್ರಿ ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ